# ಅಂಚಿಗೆ ಸರಿದವರು

ಎರಡು ಬಲಿಷ್ಠವಾದ ಸಲಗಗಳು ಕಾದಾಡುವಾಗ, ಅವು ತಮ್ಮ ಕಾಲ ಕೆಳಗಿನ ಹುಲ್ಲಿನ ದಳಗಳನ್ನು ಲೆಕ್ಕಿಸುವುದಿಲ್ಲ. ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಂಖ್ಯಾಬಾಹುಳ್ಯವಿರುವ ಸಮುದಾಯಗಳ ಕಾದಾಟದಲ್ಲಿ ಅವರ ಕಾಲುಗಳಿಗೆ ಸಿಲುಕಿ ಮೊದಲು ನುಜ್ಜು ಗುಜ್ಜಾಗುವವರು ಧ್ವನಿಯಿಲ್ಲದ, ಸಂಖ್ಯಾ ಬಲವಿಲ್ಲದ ಮುಖ್ಯವಾಗಿ ರಾಜಕೀಯ ಬಲವಿಲ್ಲದ ಸಣ್ಣ ಸಣ್ಣ ಸಮುದಾಯಗಳು. ಈ ರೂಪಕ ಇಂದಿನ ಒಳಮೀಸಲಾತಿ ಸಂಬಂಧದ ರಾಜಕೀಯ ನಿರ್ಧಾರ ಅಲೆಮಾರಿ ಸಮುದಾಯಗಳ ಭವಿಷ್ಯದ ದಾರಿಗೆ ಹೇಗೆ ಹೆಬ್ಬಂಡೆಯನ್ನು ಎಳೆದಂತಾಗಿದೆ ಎಂಬುದನ್ನು ತೋರಿಸಿಕೊಡುತ್ತದೆ. ಈ ಅಸೂಕ್ಷ್ಮ ನಿರ್ಧಾರ ಕತ್ತಲಲ್ಲಿದ್ದವರನ್ನು ಇನ್ನಷ್ಟು ಗಾಢಾಂಧಕಾರಕ್ಕೆ ತಳ್ಳಿದಂತಾಗಿದೆ. ಕೇವಲ 5000 ಅಥವಾ 10000 ಸಂಖ್ಯೆಯನ್ನೂ ಮೀರದ, ವೈವಿಧ್ಯಮಯ ಭಾಷೆ ಮತ್ತು ಸಂಸ್ಕೃತಿಗಳನ್ನು ಹೊಂದಿರುವ ಅಲೆಮಾರಿ ಸಮುದಾಯಗಳು ಕೊನೆಯಪಕ್ಷ ಒಬ್ಬನೇ ಒಬ್ಬ ಗ್ರಾಮಪಂಚಾಯಿತಿ ಸದಸ್ಯನನ್ನೂ ಹೊಂದುವಷ್ಟು ಶಕ್ತಿವಂತರಲ್ಲ! ಸೂಕ್ಷ್ಮದರ್ಶಕದಲ್ಲಿ ಹುಡುಕಬೇಕಾದ ಅಲೆಮಾರಿ ಸಮುದಾಯಗಳ ಪರವಾಗಿ ಈಗ ಪ್ರಜ್ಞಾವಂತ ಸಮಾಜ ಧ್ವನಿಯಿಲ್ಲದವರ ಬೆನ್ನಿಗೆ ನಿಲ್ಲಬೇಕಾಗಿದೆ. ಯಾವಾಗಲೂ ಕಟ್ಟಕಡೆಯವನ ಪರವಾಗಿ ನಿಲ್ಲಬೇಕಾಗಿದ್ದ ನಮ್ಮ ರಾಜಕೀಯ ವ್ಯವಸ್ಥೆ ಇಷ್ಟೊಂದು ಹೃದಯಹೀನವಾಗಬಾರದಾಗಿತ್ತು! ಕವಿ ನಾಗಚಂದ್ರ '...ವಿಯಚ್ಚರನ ಕರ್ಣಮಂ ಹೃದಯಕ್ಕೆಯ್ದಿದುದಿಲ್ಲ...' ಎಂದು ಹೇಳುವುದರ ಮೂಲಕ ರಾವಣನ ಹೃದಯಕ್ಕೆ ಮತ್ತೊಬ್ಬರ ದಿವ್ಯವಚನವನ್ನು ಕೇಳುವ ಕಿವಿಗಳಿರಲಿಲ್ಲ ಇದೇ ಅವನ ಪತನಕ್ಕೆ ಕಾರಣ ಎಂದಿದ್ದಾನೆ. ಈಗಿನ ರಾಜಕೀಯ ವ್ಯವಸ್ಥೆ, ಬಲಯುತ ಸಮುದಾಯಗಳ ಮೋಹ ತೊರೆದು, ಬಡವರು ಮತ್ತು ಅಸಹಾಯಕರ ಮಾತುಗಳನ್ನು ಕೇಳಿಸಿಕೊಳ್ಳುವ ಕಿವಿಗಳನ್ನೂ ಪಡೆದಿರಬೇಕು.

ಯಾವ ಸಮಾಜದಲ್ಲಿ ಎಲ್ಲ ಅಲ್ಪಸಂಖ್ಯಾತರು, ಅಲೆಮಾರಿಗಳು ಹಾಗೂ ಬುಡಕಟ್ಟು ಸಮುದಾಯಗಳು ಸಾಮಾಜಿಕ ನ್ಯಾಯದ ವಂಚನೆಗೆ ಒಳಗಾಗಿವೆಯೊ; ಅಂಥ ಸಮಾಜ ಸುಖೀಯಾಗಿರಲಾರದು ಎನ್ನುವುದು ಬಲ್ಲವರ ಮಾತು. ಧ್ವನಿ ಇಲ್ಲದ, ಅಸಂಘಟಿತ ಅಲೆಮಾರಿಗಳ ಪರವಾಗಿ ಮಾತನಾಡುವಾಗ ನಮ್ಮ ಹೃದಯಗಳನ್ನು ಕಲ್ಲು ಮಾಡಿಕೊಂಡು ಈ ಪ್ರಶ್ನೆಯನ್ನು ಕೇಳಬೇಕಾಗಿದೆ. ನಾವು ಹೇಳಿದ್ದನ್ನೇ ಸರ್ಕಾರ ಮತ್ತು ಸಮಾಜ ಕೇಳಬೇಕು ಎಂದು ಸಂಪತ್ತು ಮತ್ತು ಅಧಿಕಾರವಿರುವ ಬಲಿಷ್ಠ ಸಮುದಾಯಗಳು ಹೇಳುತ್ತಿವೆ. ಈ ಮಾತು ಒಳಮೀಸಲಾತಿಗಷ್ಟೇ ಸೀಮಿತವಾಗಿಲ್ಲ! 'ಸಾಮಾಜಿಕ ಮತ್ತು ಶೈಕ್ಷಣಿಕ ಜನಗಣತಿ'ಯ ಕೋಷ್ಟಕವನ್ನು ಬಹಿರಂಗಪಡಿಸುವ ಸಂದರ್ಭ ಬಂದಾಗಲೂ ಇದೇ ಅಧಿಕಾರ, ಸಂಪತ್ತು ಮತ್ತು ಸಂಖ್ಯಾ ಬಾಹುಳ್ಯವಿರುವ ಪ್ರಬಲ ಸಮುದಾಯಗಳು ತಳೆದ ನಿಲುವು ಆಘಾತಕಾರಿಯಾದುದು. ಆಗಲೂ ಅಸಂಘಟಿತ ಹಿಂದುಳಿದ ಸಣ್ಣ ಸಣ್ಣ ಸಮುದಾಯಗಳು ಈ ವರದಿ ನಮ್ಮ ಪರವಾಗಿದೆ ಎನ್ನುವುದನ್ನೂ ತಿಳಿಯಲಾರದೆ, ಧ್ವನಿ ಉಡುಗಿಸಿಕೊಂಡು ತಮ್ಮ ಹಕ್ಕುಗಳನ್ನು ದಮನವಾಗುತ್ತಿದ್ದರೂ ಅಸಹಾಯಕತೆಯಿಂದ ನೋಡುತ್ತಿದ್ದವು. ಈ ಬಗೆಯ ತರತಮ ಭಾವದ ಮನಸ್ಥಿತಿ ಮಧ್ಯಯುಗೀನ ಅತಾರ್ಕಿಕ ಅಸಹಿಷ್ಣುತೆಯ ವಿಕೃತ ಮಾದರಿ ಎನಿಸಿದೆ!

ತೀರಾ ಕಡಿಮೆ ಸಂಖ್ಯೆಯಲ್ಲಿರುವ ವಿವಿಧ ಅಲೆಮಾರಿ ಸಮುದಾಯಗಳು ಕೇಳುತ್ತಿರುವುದು ಕೇವಲ ಶೇಕಡ ಒಂದರಷ್ಟು ಪಾಲನ್ನು ಮಾತ್ರ. ಅದನ್ನೂ ಕೂಡ ಔದಾರ್ಯದಿಂದ ಕೊಡಲಾರದ ಸ್ಥಿತಿಗೆ ನಮ್ಮ ಸಾಮಾಜಿಕ ವ್ಯವಸ್ಥೆ ಕುಸಿದಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಳ್ಳೆಯದಲ್ಲ! ಇದರಿಂದಾಗಿ ತಮ್ಮ ಪಾಲನ್ನು ತಮ್ಮ ಕಣ್ಣ ಮುಂದೆಯೇ ಇನ್ನೊಬ್ಬರು ಕಸಿದುಕೊಳ್ಳುವುದನ್ನು ಅಸಹಾಯಕತೆಯಿಂದ ನೋಡುವ ಸ್ಥಿತಿ ಇಂದು ಅಲೆಮಾರಿ ಸಮುದಾಯಗಳಿಗೆ ಬರಬಾರದಿತ್ತು. ಮೀಸಲಾತಿ ಎನ್ನುವುದು ಭಿಕ್ಷೆಯಲ್ಲ! ಅದು ನಮ್ಮ ಹಕ್ಕು. ಸಮಾನ ಅವಕಾಶಗಳಿಗಾಗಿ ಕೇಳುವುದು ಅಪರಾಧವಲ್ಲ; ಆದರೆ ಅವರ ನ್ಯಾಯಯುತವಾದ ಬೇಡಿಕೆಗೆ ಕಿವಿಗೊಡದಿರುವುದು ಸಾಮಾಜಿಕ ನ್ಯಾಯದ ಉಲ್ಲಂಘನೆ. ಸಾಮಾಜಿಕ ನ್ಯಾಯಕ್ಕೆ ಓರೆಕೋರೆಗಳನ್ನು ಒಳಗೊಂಡೂ ಉತ್ತಮ ಪರಂಪರೆಯಿರುವ ಕರ್ನಾಟಕ ಸಾಮಾಜಿಕ ನ್ಯಾಯದ ಪರವಾಗಿರುವುದು ನಮ್ಮ ಕಣ್ಣಮುಂದಿದೆ. ಈ ಪರಂಪರೆಯನ್ನು ವಿಕೃತಗೊಳಿಸಬಾರದು. ಇದರ ನಡುವೆಯೂ ಕೂಡ ಒಂದು ಆಧಾರ್ ಕಾರ್ಡ್‌ಗಾಗಿ, ಒಂದು ಮತದಾರನ ಗುರುತಿನ ಚೀಟಿಗಾಗಿ, ರೇಷನ್ ಕಾರ್ಡಿಗಾಗಿ ಅಲೆದಾಡುತ್ತಿರುವ ಅಲೆಮಾರಿಗಳ ದಾರುಣ ಚಿತ್ರ ನಮ್ಮ ಕಣ್ಣಮುಂದೆ ಬಂದು ನಿಲ್ಲುತ್ತದೆ. ಇನ್ನು ಈ ಸಮುದಾಯಗಳು ಶಿಕ್ಷಣ, ಸರ್ಕಾರಿ ಉದ್ಯೋಗ, ಶಿಕ್ಷಕ, ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ ಇಂತಹ ಕ್ಷೇತ್ರಗಳಲ್ಲಿ ಪ್ರವೇಶ ಪಡೆದಿರುವವರ ಸಂಖ್ಯೆಯನ್ನು ಯಾವ ಅಂಕಿಅಂಶಗಳೂ ಹೇಳುತ್ತಿಲ್ಲ! ಇಂತಹ ಕಠೋರ ವಾಸ್ತವದ ನಡುವೆ ಅಲೆಮಾರಿ ಸಮುದಾಯಗಳನ್ನು ಮೀಸಲಾತಿಯಲ್ಲೂ ವಂಚಿಸುವ ವಿದ್ಯಮಾನಗಳು ನಡೆಯುತ್ತಲೇ ಇವೆ. ಈ ಮೂಲಕ ಅವರ ಯಾವ ಮನವಿಗೂ ಮಾನ್ಯತೆ ಇಲ್ಲ ಎಂದು ಇವೊತ್ತಿನ ರಾಜಕೀಯ ವ್ಯವಸ್ಥೆ ಒಪ್ಪಿಕೊಂಡಂತಾಗಿದೆ. ಹೀಗಾದಾಗ ಸಹಿಷ್ಣುತೆಯ ಸಾಮಾಜಿಕ ಏಕತೆಯ ಕಡೆಗೆ ದುರ್ಬಲ ಮತ್ತು ದಿಕ್ಕುದೆಸೆಯಿಲ್ಲದ ಅಲೆಮಾರಿ ಸಮುದಾಯಗಳು ಚಲಿಸುವುದಾದರೂ ಹೇಗೆ?

ದೇಶದಲ್ಲಿ ಮೀಸಲಾತಿ ಪ್ರಶ್ನೆ ಎದುರಾದಾಗಲೆಲ್ಲ ದಕ್ಷತೆ, ಅರ್ಹತೆಗಳನ್ನು ಕೇಳಲಾಗುತ್ತದೆ. ವಾಸ್ತವವಾಗಿ ಅತ್ಯಂತ ಕೆಳ ಸ್ತರದ ಅಲೆಮಾರಿ ಮತ್ತು ಬುಡಕಟ್ಟು ಸಮುದಾಯಗಳಲ್ಲಿರುವ ಕೌಶಲ, ದಕ್ಷತೆ ಮತ್ತು ಅರ್ಹತೆಯನ್ನು ಸ್ವೀಕರಿಸುವ ಮನೋಧರ್ಮವೇ ನಮ್ಮ ರಾಜಕೀಯ ವ್ಯವಸ್ಥೆಗಿಲ್ಲ! ಈ ಲೋಪಕ್ಕೆ ಸಮಾಜ ಹೇಗೆ ಹೊಣೆಯೊ ಹಾಗೆಯೇ ಆಳುವ ಸರ್ಕಾರಗಳೂ ನ್ಯಾಯದ ಕಟಕಟೆಯಲ್ಲಿ ನಿಲ್ಲಬೇಕಿದೆ. ಅಲೆಮಾರಿಗಳ ಹಕ್ಕಿನ ಬೇಡಿಕೆಗಳೆಲ್ಲ ಈಗ ಪ್ರಾರ್ಥನೆಯ ಸೊಲ್ಲುಗಳಾಗುತ್ತಿವೆ. ಮೊದಲು ನಮ್ಮ ಸಹಜೀವಿಗಳಾದ ಅಲೆಮಾರಿ ಸಮುದಾಯಗಳು ಉಳಿದವರಂತೆ ಮೇಲೇರಲು ಮೊದಲು ಒಂದು ಏಣಿಯನ್ನು ಕಲ್ಪಿಸಿಕೊಡಲಿ ಉಳಿದದ್ದು ಆಮೇಲೆ.

ಅಲೆಮಾರಿಗಳು ಕೇಳುತ್ತಿರುವುದು ಉಳಿದೆಲ್ಲ ಸಮುದಾಯಗಳು ಕೇಳುತ್ತಿರುವಂತೆ ಶಾಸಕ, ಮಂತ್ರಿ, ರಾಜಕೀಯ ಅಧಿಕಾರ, ವೈದ್ಯಕೀಯ ಕಾಲೇಜು, ಎಂಜಿನಿಯರಿಂಗ್ ಕಾಲೇಜುಗಳಂಥ ಆದಾಯ ತರುವ ಬೇಡಿಕೆಗಳನ್ನಲ್ಲ! ಅವರು ಕೇಳುತ್ತಿರುವುದು ಶೇಕಡ ಒಂದರಷ್ಟು ಒಳಮೀಸಲಾತಿ ಮಾತ್ರ! ಹೀಗೆ ಒಳಮೀಸಲಾತಿಯನ್ನು ಕಲ್ಪಿಸಿಕೊಡುವುದರಿಂದ ಅಲೆಮಾರಿ ಸಮುದಾಯಗಳು ಎದುರಿಸುತ್ತಿರುವ ಎಲ್ಲ ಸಮಕಾಲೀನ ವ್ಯಾಧಿಗಳೂ ಶಮನ ಆಗುವುದಿಲ್ಲ ಎನ್ನುವುದೂ ನಿಜ. ಆದರೆ ಈ ನಿಟ್ಟಿನಲ್ಲಿ ಸಮಾನ ಅವಕಾಶಗಳ ಕಡೆ ಚಲಿಸಬಹುದಾದ ಒಂದು ಕಿರುದಾರಿಯನ್ನು ತೆರೆದಂತಾಗುತ್ತದೆ. ಆಗ ಅವರ ಕಣ್ಣುಗಳಲ್ಲೂ ನಾಳಿನ ಭವಿಷ್ಯದ ಬೆಳಕು ಮಿನುಗುತ್ತದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಗೆದ್ದವರ ಜಂಬವನ್ನು ಜಗತ್ತು ಸಹಿಸುತ್ತದೆ. ಇತರರ ಜಂಬವನ್ನು ಕೇಳುವುದಿಲ್ಲ.
  —ಜಾನ್ ಬ್ಲೇಕ್
- ಮರ್ತ್ಯದಲ್ಲಿ ನಿಂತು ಗೆಲ್ಲು, ಮರ್ತ್ಯವೇ ಒರೆಗಲ್ಲು.
  —ವಿನಾಯಕ ಕೃಷ್ಣ ಗೋಕಾಕ
- ಮಾನವನೋರ್ವನಿಗಾಗಿ ಪ್ರಾಣ ತೆರುವವನಿಗಿಂತ ಗುರಿಯೊಂದಕ್ಕೆ ಪ್ರಾಣ ತೆರುವವನೇ ಶ್ರೇಷ್ಠನಾಗುತ್ತಾನೆ.
  —ಆಸ್ಕರ್ ವೈಲ್ಡ್
- ಕಾಲವನ್ನು ನಾವು ಪಾಲಿಸಿದರೆ ಅದು ನಮಗೆ ವಿಧೇಯವಾಗಿರುತ್ತದೆ.
  —ಎಂ. ವಿಶ್ವೇಶ್ವರಯ್ಯ
- ಮಾತು ಮನಸ್ಸುಗಳನ್ನು ಒಂದುಗೂಡಿಸಬೇಕೇ ಹೊರತು ಒಡೆಯಬಾರದು.
  —ಮಾಸ್ತಿ
- ಹೋದ ಐಶ್ವರ್ಯ ಸಿಗಬಹುದು, ಹೋದ ಹೊತ್ತು ಸಿಗುವುದಿಲ್ಲ.
  —ಅನಕೃ
- ಈ ಪ್ರಪಂಚ ಒಂದು ಗರಡಿಮನೆ. ನಾವಿಲ್ಲಿ ಬಲಶಾಲಿಗಳಾಗುವುದಕ್ಕೆ ಬಂದಿರುವೆವು.
  —ಸ್ವಾಮಿ ವಿವೇಕಾನಂದ